★★★

ಮದುವೆಗಿಂತ ಮೊದಲು ಹಾವೇರಿ ಜಿಲ್ಲೆಯ ಅಂಬೇಹಳ್ಳಿ ಎಂಬ ಪುಟ್ಟ ಹಳ್ಳಿಯಲ್ಲಿ ಹುಟ್ಟಿ ಬೆಳೆದು ಪಿಯೂಸಿ ತನಕ ಓದಿದ ಸರಸ್ವತಿ, ಮುಂದೆ ಡಿಗ್ರಿ ಕಲಿಯಲು ಹಾವೇರಿ ಪಟ್ಟಣಕ್ಕೆ ಬರಲು ಬಸ್ಸಿನ ವ್ಯವಸ್ಥೆ ಸರಿಯಾಗಿಲ್ಲದೇ ಓದಿಗೆ ಪೂರ್ಣವಿರಾಮ ಇತ್ತವಳು. ಅದರ ಮಾರನೇ ವರ್ಷವೇ ಅಂದರೆ ತನ್ನ ಹತ್ತೊಂಬತ್ತನೇ ವಯಸ್ಸಿನಲ್ಲೇ ಅವಳ ಮದುವೆ ನಿಶ್ಚಯವಾಗಿ, ಸಿಂಡಿಕೇಟ್ ಬ್ಯಾಂಕಿನಲ್ಲಿ ಕ್ಲಾರ್ಕ ಆಗಿದ್ದ ಈ ಶಂಕರನೊಂದಿಗೆ ಹಾವೇರಿಯ ಆರ್ಯಂಬಾ ಮಠದಲ್ಲಿ ನಡೆದು, ಮುಂದಿನ ಆರು ತಿಂಗಳಲ್ಲಿ ಬೆಳಗಾವಿಯ ನೌಕರರ ಭವನದಲ್ಲಿ ಮದುವೆಯೂ ಜರುಗಿ ಹೋಗಿತ್ತು. ಆ ಹಂತದಲ್ಲಿ ಜರತಾರಿ ಸೀರೆಗಳು, ಹೊಳೆವ ಆಭರಣಗಳು ಅವಳನ್ನು ಬೇರೆಲ್ಲೂ ಕಣ್ತೆರೆದು ನೋಡದಂತೆ ಮೈಮರೆಸಿ ಕೂಡಿಸಿಬಿಟ್ಟಿದ್ದವು.

ನಂತರ ಸಂಸಾರ ಸುರುವಾದಾಗ ಅತ್ತೆ ರೇಣುಕಮ್ಮ 'ಬ್ಯಾಳಿ ಹಸನ ಮಡಾಕ ನಿಮ್ಮವ್ವ ಕಲಸಿಲ್ಲನ?' 'ಮುಸರಿ ಸ್ವಚ್ಛಂಗ ಬಳಿಯೂದ್ ನಿಮ್ಮವ್ವ ಹೇಳಕೊಟ್ಟಿಲ್ಲನ?' 'ಅಯ್ಯ ನಮ್ಮವ್ವ, ರೊಟ್ಟೀ ಬೆಸಂಗ ನಾದಾಕ ಬರವಲ್ದಲ್ಲಲೇ ನಮ್ಮವ್ವ.' 'ಚಂದಂಗ ಸಂಸಾರ ಮಾಡಾಕ ಕಲ್ತೇ ಇಲ್ಲಬಿಡ ನೀ.' 'ಛಿಛೀ ನೆಗಡೀ ಆದಾಗ ಯಾರರ ಬಲಗೈಯಾಗ ಸಿಂಬಳದ ಮೂಗ್ ಹಿಂಡತಾರೆನ?' ಎನ್ನುತ್ತಲೇ ಹಗೂರಕ್ಕೆ, ಹುಬ್ಬಳ್ಳಿಯಲ್ಲಿ ನೌಕರಿ ಮಾಡುವ ಮಗ ಶಂಕರನ ಬಳಿ ಸೊಸೆಯನ್ನು ಕಳಿಸಲು ಮನಸ್ಸಿಲ್ಲದೇ 'ಶನಿಯಾರ ಆಯ್ತಾರ ಮನೀಗ್ ಬಂದ್ ಹೋಗಲೇ ಶಂಕ್ರ್ಯಾ, ನಿನ ಹೇಂತೀಗೆ ನಾ ಬೇಸಂಗ ಅಡಗೀ ಕಲಸ್ತೇನಿ' ಎಂದು ರಗಳೆ ತೆಗೆದಾಗಲೇ ಸರಸ್ವತಿಗೆ

